# ಅಂಶ - 11 ಸಾಮಾಜಿಕ ಅಧ್ಯಯನ

**ವಿಷಯ ಕ್ರಮ**

11.0 ಉದ್ದೇಶ
11.1 ಪೀಠಿಕೆ
11.2 ಪಠ್ಯ

ಅಭ್ಯಾಸ - 1
11.3 ಸಾರಾಂಶ

ಅಭ್ಯಾಸಗಳಿಗೆ ಉತ್ತರಗಳು

## 11.0 ಉದ್ದೇಶ

ಈ ಅಂಶವನ್ನು ಓದಿದ ಮೇಲೆ ನೀವು

- ಪ್ರತಿಫಲಾಪೇಕ್ಷೆ ಇಲ್ಲದೆ ಸಮಾಜಕ್ಕೆ ಯಾವ ರೀತಿಯಲ್ಲಿ, ಯಾಕೆ, ಎಲ್ಲಿ, ಯಾರಿಗೆ ಸೇವೆ ಮಾಡಬೇಕು ಎಂಬುದನ್ನು ಅರಿತುಕೊಳ್ಳುವಿರಿ.
- ಈ ಸಮಾಜವನ್ನು ಸುವೀರಾಜ್ಯವನ್ನಾಗಿ ಮಾಡಲು ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳನ್ನು ತಿಳಿದು ಕೊಳ್ಳುವಿರಿ.
- ಸಾಮಾನ್ಯ ಮನುಷ್ಯನು ಸ್ವಂತ ಕುಟುಂಬವನ್ನು ಎಷ್ಟು ಜಾಗ್ರತೆಯಿಂದ ಕಾಪಾಡಿಕೊಳ್ಳುವನೋ, ಅಷ್ಟೇ ಜಾಗ್ರತೆಯಾಗಿ, ಸಮಾಜವನ್ನೂ ರಕ್ಷಿಸಲು ಸ್ವಂತ ಕುಟುಂಬವೆಂದು ಭಾವಿಸಿ ನಿಸ್ವಾರ್ಥವಾಗಿ ಶ್ರಮಿಸಬೇಕೆಂಬ ಹಂಬಲ ನಿಮ್ಮಲ್ಲಿ ಬೆಳೆಯುತ್ತದೆ.

## 11.1 ಪೀಠಿಕೆ

ನಮ್ಮ ನಿತ್ಯದ ವ್ಯವಹಾರದಲ್ಲಿ 'ಸಮಾಜ ಸೇವೆ' ಎಂಬ ಮಾತನ್ನು ಸುಲಭವಾಗಿ ಬಳಸುತ್ತೇವೆ. ಆದರೆ ಸಮಾಜ ಸೇವೆ ಎಂದರೇನು? ಅದನ್ನು ಯಾರು ಮಾಡುತ್ತಾರೆ? ಏಕೆ ಮಾಡುತ್ತಾರೆ? ಆ ಬಗೆಯ ಸೇವೆಗೆ ತಕ್ಕವರು ಯಾರು ಎಂಬ ಪ್ರಶ್ನೆಗಳಿಗೆ ಉತ್ತರಗಳು ಸರಳವಲ್ಲ. ಈ ಲೇಖನವು ಮೇಲೆ ಹೇಳಿದ ಪ್ರಶ್ನೆಗಳಿಗೆ ಉತ್ತರ ನೀಡುವ ಉದ್ದೇಶವನ್ನು ಹೊಂದಿದೆ.

# 11.2 ಪಠ್ಯ

**ಸಮಾಜ ಸೇವೆ**

ಸಮಾಜಸೇವೆ ಎಂಬುದು ಬಹು ಪುರಾತನವಾದ ಪರಿಕಲ್ಪನೆ. ಸಮಾಜಕ್ಕೆ ಯಾವುದು ವಿಹಿತವಾದುದೋ ಅದನ್ನು ನೆರವೇರಿಸುವುದೇ ಸಮಾಜ ಸೇವೆ. 'ಸೇವೆ' ಎಂದಾಕ್ಷಣ 'ಪ್ರತಿಫಲಾಪೇಕ್ಷೆ ಇಲ್ಲದ ಕಾರ್ಯ' ಎಂದೇ ಅರ್ಥ ಮಾಡಲಾಗುವುದು. ತನ್ನಿಂದ ಇತರರಿಗೆ ಉಪಕಾರವಾಗುವಂಥ ಯಾವುದೇ ಕೆಲಸವನ್ನು ಕೈಕೊಂಡರೆ ಅದನ್ನು 'ಸೇವೆ' ಎಂದು ತಿಳಿಯಲಾಗುವುದು, ಆದರೆ ದೇವರಿಗೆ ಪೂಜೆ ಮಾಡಿಸುವುದೂ 'ಸೇವೆ' ಎನ್ನಿಸಿಕೊಳ್ಳುತ್ತದೆ. 'ಜನಸೇವೆಯೇ ಜನಾರ್ದನ ಸೇವೆ' ಎಂದು ಹೇಳುತ್ತಾ ದೇವರ ಸೇವೆ, ಜನರ ಸೇವೆ ಸಮಾನ ಕಾರ್ಯಗಳೆಂದೂ, , ಅಥವಾ ದೇವರ ಸೇವೆಯು ಜನರಸೇವೆಯ ಮೂಲಕವೇ ಆಗಬೇಕು ಎಂದೂ ವಾದ ಮಾಡಲಾಗುವುದು. ಅದು ಏನೇ ಇರಲಿ 'ಸೇವೆ' ಎಂಬ ಶಬ್ದವು ನಿಸ್ವಾರ್ಥವನ್ನು, ಪ್ರತಿಫಲವನ್ನು ಬಯಸದಂಥ ಮನೋನಿರ್ಧಾರವನ್ನು ಸೂಚಿಸುತ್ತದೆ.

ಆದರೆ ಸಮಾಜಸೇವೆ ಎಂದರೆ ಯಾರ ಸೇವೆ? ಎನ್ನುವ ಪ್ರಶ್ನೆ ಏಳುತ್ತದೆ. ತನ್ನ ಮನೆಯಲ್ಲಿ ಕೆಲಸ ಮಾಡಿದರೆ, ತನ್ನ ಹೆಂಡತಿಯು ಹಾಸಿಗೆ ಹಿಡಿದು ಮಲಗಿದಾಗ ಆಕೆಯನ್ನು ಉಪಚರಿಸಿದರೆ, ತನ್ನ ಹೆತ್ತವರು ವೃದ್ಧರಾದುದರಿಂದ ಅವರ ರಕ್ಷಣೆಯನ್ನು ಕೈಕೊಂಡರೆ, ತನ್ನ ಮಗನ ಶಿಕ್ಷಣದಲ್ಲಿ ಧನ ಮತ್ತಿತರ ರೀತಿಯಲ್ಲಿ ನೆರವಾದರೆ, ತನ್ನ ಸಹೋದರಿ ವಿಧವೆಯಾದಳೆಂದು ಆಕೆಗೆ ಹಾಗೂ ಆಕೆಯ ಮಕ್ಕಳಿಗೆ ಸಹಾಯ ಮಾಡಿದರೆ, ತನ್ನ ಸಹೋದರ ಅಪಘಾತಕ್ಕೀಡಾಗಿ ಊನಶಕ್ತನಾದನೆಂದು ಅವನ ಪೋಷಣೆಯ ಭಾರವನ್ನು ವಹಿಸಿಕೊಂಡರೆ ಅದು ಸಮಾಜ ಸೇವೆಯಾಗುತ್ತದೆಯೋ ಇಲ್ಲವೋ? ಬಹುಶ: ಇವೆಲ್ಲ ಕಾರ್ಯಪ್ರಸಂಗಗಳು ತನ್ನ ಕರ್ತವ್ಯಗಳೆಂದು ತೋರಬಹುದು. ಹಾಗೆಂದರೆ ಅನ್ಯರ ಸೇವೆಯನ್ನು ಕೈಕೊಳ್ಳುವುದು ಕರ್ತವ್ಯವಲ್ಲವೆ? ಎಂಬ ಪ್ರಶ್ನೆ ಏಳುತ್ತದೆ.

ಕೆಲವು ಉದಾಹರಣೆಗಳನ್ನು ನೋಡೋಣ; ಸಮುದಾಯದಲ್ಲಿ ರಸ್ತೆಗಳು ಕೆಟ್ಟಿವೆ ಅವನ್ನು ಸರಿಮಾಡಿಸಿದೆ; ಊರಿನಲ್ಲಿ ಕುಡಿಯುವ ನೀರಿನ ಭಾವಿಯಿಲ್ಲ ಅದನ್ನು ತೋಡಿಸಿದೆ; ಊರಿಂದೂರಿಗೆ ಹೋಗುವ ಪ್ರಯಾಣಿಕರಿಗೆ ರಾತ್ರಿ ತಂಗಲು ಸ್ಥಳವಿಲ್ಲ, ಒಂದು ಛತ್ರವನ್ನು ಕಟ್ಟಿಸಿದೆ; ಊರ ಮಕ್ಕಳ ಅಭ್ಯಾಸಕ್ಕೆ ಶಾಲಾಕಟ್ಟಡವಿಲ್ಲ, ಅದನ್ನು ಕಟ್ಟಿಸಿದೆ; ಬಡವರಿಗೆ ವಸತಿಗಳಿಲ್ಲ, ಅವನ್ನು ನಿರ್ಮಿಸಿದೆ; ಊರಿನ ದೇವತೆಯ ಗುಡಿ ಬಿದ್ದುಹೋಗಿದೆ, ಅದನ್ನು ಪುನರ್‌ನಿರ್ಮಿಸಿದೆ, ಊರ ದನಗಳಿಗೆ ಅನುಕೂಲವಾಗಲಿ ಎಂದು ಗೋಕಟ್ಟೆ ಕಟ್ಟಿಸಿದೆ - ಈ ಎಲ್ಲ ಕಾರ್ಯಗಳಿಂದ ನಾನು ಸಮಾಜಸೇವೆಯನ್ನು ಮಾಡಿದೆ ಎಂದು ಭಾವಿಸಲಾಗುವುದು. ಇಂಥ ಸಾರ್ವಜನಿಕವಾದ ಉತ್ತಮ ಕಾರ್ಯಗಳು ಸಮಾಜಸೇವಾ ಕಾರ್ಯಗಳಾಗುತ್ತವೆ. ಆದರೆ ನಾನು ಮಾಡಿದ ಕಾರ್ಯಗಳಿಗೆ ಹಣವನ್ನು ತೆಗೆದುಕೊಂಡರೆ ನಾನೊಬ್ಬ ಕಂಟ್ರಾಕ್ಟರ್ ಆಗುತ್ತೇನೆ. ಸಾರ್ವಜನಿಕ ಹಣವನ್ನು ಉಪಯೋಗಿಸಿ ರಸ್ತೆ — ಭಾವಿಗಳನ್ನು,ಕೆರೆ-ಕಾಲುವೆಗಳನ್ನು, ಗುಡಿ-ಗುಂಡಾರಗಳನ್ನು, ಮಠ - ಛತ್ರಗಳನ್ನು, ಶಾಲೆ - ಕಾಲೇಜುಗಳನ್ನು ನಿರ್ಮಿಸಿದೆನೆಂದರೆ ನಾನು ಸಮಾಜಸೇವೆಯನ್ನು ಮಾಡಿದಂತಾಗುವುದಿಲ್ಲ. ನನ್ನ ಹಣ, ನನ್ನ ಸಮಯ ನನ್ನ ಶ್ರಮ - ಇವೆಲ್ಲಾ ಆ ಕಾರ್ಯಗಳಿಗೆ ವ್ಯಯವಾಗಬೇಕು. ಆಗ ಮಾತ್ರವೇ ಅವು ಸೇವಾಕಾರ್ಯಗಳಾಗುತ್ತವೆ. ಇವನ್ನೇ ಸಮಾಜಕಲ್ಯಾಣ ಕಾರ್ಯಗಳೆಂದೂ, ಸಮಾಜ ಕಾರ್ಯಗಳೆಂದೂ ತಿಳಿಯಲಾಗುವುದು.

ಅಂದರೆ ಪರಂಪರಾಗತವಾಗಿ 'ಸೇವೆ' ಎನ್ನುವ ಶಬ್ದಕ್ಕೆ ಈ ಅರ್ಥಗಳನ್ನು ಹಚ್ಚಲಾಗುವುದು. ಸೇವೆಯು ಯಾವಾಗಲೂ ಇತರರ ಕಲ್ಯಾಣಕ್ಕಾಗಿಯೇ ಇರುವುದು, ಇದೇ ಸರಿಯಾದ ಕಾರ್ಯ.

ಸಮಾಜ ಸೇವಾ ಕಾರ್ಯಗಳು ಸಾರ್ವಜನಿಕ ಕಾರ್ಯಗಳು ಮಗುವು ಹುಟ್ಟಿದಂದಿನಿಂದ ಸಾಯುವವರೆಗೂ ಅವನಿಗೆ ಅತ್ಯಗತ್ಯವಾದ ಅವಶ್ಯಕತೆಗಳನ್ನು, ಸೌಲಭ್ಯಗಳನ್ನು ಒದಗಿಸಬೇಕಾಗುತ್ತದೆ. ಆಹಾರ, ವಸತಿ, ಅರಿವೆ, ಶಿಕ್ಷಣ, ಆರೋಗ್ಯ ಮನರಂಜನೆ ಇತ್ಯಾದಿ ಅವಶ್ಯಕತೆಗಳು ಒದಗಿಸಲ್ಪಡದಿದ್ದರೆ ಅವನು ಜೀವಿಸುವುದೇ ಸಾಧ್ಯವಿಲ್ಲ. ಅವನು ಹುಟ್ಟುವುದಕ್ಕೆ ಮೊದಲೇ ಅವನ ತಾಯಿಯಾಗುವಾಕೆ, ಅವನ ತಂದೆಯಾಗುವಾತ ಇಬ್ಬರೂ ಆರೋಗ್ಯದಿಂದಿರಬೇಕು, ಅದಕ್ಕಾಗಿ ಅವರಿಗೆ ಬೇಕಾದ ಸೌಲಭ್ಯಗಳು ಲಭ್ಯವಾಗಬೇಕು. ಹಾಗಾದರೆ ಅವರು ಸರಿಯಾದ ತಂದೆ-ತಾಯಿಯರಾಗುತ್ತಾರೆ, ಮಗುವಿನ ಹುಟ್ಟುಸರಳವಾಗುತ್ತದೆ. ತಾಯಿಯ ಗರ್ಭದಲ್ಲಿ ಶಿಶು ಸರಿಯಾಗಿ ಬೆಳೆಯಲೂ, ತಾಯಿಯು ಸರಿಯಾದ ರೀತಿಯ ಊಟೋಪಚಾರ, ಔಷದೋಪಚಾರ ಪಡೆಯಬೇಕು. ಮಗು ಹುಟ್ಟಿದ ಮೇಲೆ ಅದರ ಪೋಷಣೆ, ಅದರ ಶಿಕ್ಷಣ, ಅದು ಬೆಳೆದ ಮೇಲೆ ಅದಕ್ಕೆ ಸೂಕ್ತವಾದ ಉದ್ಯೋಗ, ಅದಕ್ಕೆ ಸರಿಯಾದ ಜೊತೆಗಾತಿ,ಮನೆ, ಮನರಂಜನೆ ಇತ್ಯಾದಿಗಳು ಬೇಕು. ದುಡಿದುಡಿದು ಹಣ್ಣಾಗಿ ನಿವೃತ್ತಿ ಪಡೆದ ಮೇಲೆ ಸಾಯುವವರೆಗೂ ವೈಯಕ್ತಿಕವಾದ, ವೃಂದಗತವಾದ, ಸಮುದಾಯಗತವಾದ ಸೌಲಭ್ಯಗಳು ಲಭ್ಯವಾಗಿರಬೇಕು.

ಸೌಲಭ್ಯಗಳನ್ನು ಕೆಲವು ಗುಂಪುಗುಂಪಾಗಿ ವಿಂಗಡಿಸಬಹುದು : ಆಹಾರ - ನೀರು, - ಅರಿವೆ - ಆರೋಗ್ಯ, ಗೃಹ, ಶಿಕ್ಷಣ, ಉದ್ಯೋಗ, ಮನರಂಜನೆ, ಇವು ಪ್ರತಿಯೊಬ್ಬ ಮಾನವನಿಗೂ ಬೇಕು. ಸ್ವಾಭಾವಿಕವೂ, ಸರಳವೂ, ಸುಖಕರವೂ ಆದ ಜೀವನ ನಿರ್ವಹಣೆಗಾಗಿ ಇವೆಲ್ಲ ಸೌಲಭ್ಯಗಳು ಬೇಕೇ ಬೇಕಾಗುತ್ತವೆ. ಇವು ಯಾರಾರಿಗೆ ಯಾವಾವ ಪ್ರಮಾಣದಲ್ಲಿ ಬೇಕಾಗುತ್ತವೆ ಎಂಬುದನ್ನು ವ್ಯಕ್ತಿಯ ಶಾರೀರಿಕ, ಬೌದ್ಧಿಕ ಹಾಗೂ ಸಾಮಾಜಿಕ ಅಗತ್ಯಗಳಿಗೆ ಅನುಸಾರವಾಗಿಯೂ, ಲಭ್ಯವಿರುವ ಸಂಪನ್ಮೂಲಗಳಿಗೆ ಅನುಸಾರವಾಗಿಯೂ, ನಿರ್ಣಯಿಸಬೇಕಾಗುತ್ತದೆ.

ಈ ಸೌಲಭ್ಯಗಳು ಕಡಮೆಯಾದರೆ ಅಥವಾ ದೊರಕದಿದ್ದರೆ ಮಾನವನ ಜೀವನವು ದುರ್ಭರವಾಗುತ್ತದೆ, ದು:ಖಮಯವಾಗುತ್ತದೆ. ಇವೆಲ್ಲವೂ ಎಲ್ಲರಿಗೂ ಬೇಕಾದುದರಿಂದ ಇವು ಸಾರ್ವಜನಿಕ ಮಹತ್ವವನ್ನು ಪಡೆಯುತ್ತವೆ.

ಸಾಮಾನ್ಯವಾದ ಅವಶ್ಯಕತೆಗಳೆಂದು ಇವನ್ನು ಪರಿಗಣಿಸಲಾಗುವುದು. ಪ್ರಾಣಿಗಳಿಂದ ಭಿನ್ನವಾದ ಜೀವನವನ್ನು ನಡೆಸುತ್ತಿರುವ, ಅಥವಾ ನಡೆಸಬೇಕಾಗಿರುವ, ಮಾನವನಿಗೆ ಇವುಗಳ ಕೊರತೆಯಿಂದ ಅಥವಾ ಅಲಭ್ಯದಿಂದ ಸರಳವಾದ ಜೀವನ ನಡೆಸಲು ಸಾಧ್ಯವಾಗುವುದಿಲ್ಲ. ಇವೆಲ್ಲವೂ ಮಾನವನ ಜೀವನವು ಸಂಪುಷ್ಟವಾಗಿ ರೂಪುಗೊಳ್ಳಲು, ಸಂಪೋಷಿಸಲ್ಪಡಲು ಹೂಡಿದ ಸಂಪನ್ಮೂಲಗಳು. ಇರುವ ಸರಳ ಜೀವನವನ್ನು ಸಂರಕ್ಷಿಸಿಕೊಂಡು ಅದನ್ನು ಅಭಿವೃದ್ಧಿಪಡಿಸಿಕೊಳ್ಳಲು ನೆರವಾಗುವಂಥವು ಈ ಸೌಲಭ್ಯಗಳು. ಆದುದರಿಂದ ಇವು ಅವಶ್ಯಕ, ಅತ್ಯಾವಶ್ಯಕ ಸೌಲಭ್ಯಗಳಾಗುತ್ತವೆ.

ಈ ಸಂದರ್ಭದಲ್ಲಿ ಒಂದು ಪ್ರಶ್ನೆ ಏಳುತ್ತದೆ. ಈ ಸೌಲಭ್ಯಗಳನ್ನು ಯಾರು ಒದಗಿಸಬೇಕು? ಎಂಬುದೇ ಆ ಪ್ರಶ್ನೆ. ಇವೆಲ್ಲವುಗಳನ್ನೂ ಸಮಾಜಸೇವೆಗಳೆಂದು ಪರಿಗಣಿಸಿದರೆ ಪರಂಪರೆಯ ಅರ್ಥದಲ್ಲಿ ಇವೆಲ್ಲವನ್ನೂ ಪುಕ್ಕಟೆಯಾಗಿ ಜನರಿಗೆ ಒದಗಿಸಬೇಕಾಗುತ್ತದೆ. ಹಾಗಾದರೇನೇ ಇವುಗಳನ್ನು ಸೇವೆಗಳೆಂದು ಕರೆಯಬಹುದು. ಆದರೆ ಇವನ್ನು ಯಾರು ಒದಗಿಸಬೇಕು? ಇದು ಉತ್ತರಿಸಲು ಕಠಿಣವಾದ ಪ್ರಶ್ನೆ. ಯಾರಾದರೂ ದಾನಿಗಳು, ಧರ್ಮಾತ್ಮರು ಅಥವಾ 'ಪುಣ್ಯಾತ್ಮರು' ಈ ಸೇವೆಗಳನ್ನು ಕೈಕೊಳ್ಳಬೇಕು; ಅಥವಾ ಸರಕಾರವು ಈ ಸೌಲಭ್ಯಗಳನ್ನು ಒದಗಿಸಬೇಕು; ಇಲ್ಲವೇ ಆ ಇಬ್ಬರೂ ಈ ಕಾರ್ಯದಲ್ಲಿ ಆಸಕ್ತಿಯನ್ನು ತಳೆಯಬೇಕು ಎಂದಾಗುತ್ತದೆ. ಆದರೆ ಎಲ್ಲ ಜನರಿಗೂ ಪುಕ್ಕಟೆಯಾಗಿ ಇವನ್ನು ಒದಗಿಸುವುದು ಸರಿಯಾದುದೇ? ಸೇವೆಯನ್ನು ಪಡೆಯುವವರು ಕೇವಲ ಪರಾವಲಂಬಿಗಳಾಗುವುದಿಲ್ಲವೆ? ಎಂಬ ಕೆಲವು ಭಾವನಾತ್ಮಕ ಅಂಶಗಳು ಏಳುತ್ತವೆ. ಸಾಮಾನ್ಯವಾಗಿ ಜನರು ಆರೋಗ್ಯವಂತರಾಗಿರುತ್ತಾರೆ, ತಮ್ಮ ತಮ್ಮ ಜೀವನ ನಿರ್ವಹಣೆಗೆ ಸಾಕಾಗುವಷ್ಟು ದುಡಿದುಕೊಳ್ಳಲು ಸಮರ್ಥರಾಗಿದ್ದಾರೆ. ಆದುದರಿಂದ ಎಲ್ಲರಿಗೂ ಇಂಥ ಸೇವಾಕಾರ್ಯಗಳನ್ನು ಪುಕ್ಕಟೆಯಾಗಿ ಒದಗಿಸುವುದು ಒಂದು ರೀತಿಯಲ್ಲಿ ಅನೈತಿಕವೂ ಇನ್ನೊಂದು ದೃಷ್ಟಿಯಲ್ಲಿ ಅನವಶ್ಯವೂ ಆಗುತ್ತದೆ. ಆದರೆ ಅವನ್ನು ಎಲ್ಲರಿಗೂ ಹಣಕ್ಕಾಗಿಯೂ ಒದಗಿಸಬೇಕಾಗುತ್ತದೆ. ಶಿಕ್ಷಣ ಪಡೆಯಬೇಕೆನ್ನುವವರಿಗೆ ಶಾಲೆ, ಪ್ರಯಾಣ ಹೋಗಬೇಕೆನ್ನುವವರಿಗೆ ವಾಹನಗಳನ್ನು, ಸರಿಯಾದ ರಸ್ತೆಗಳನ್ನು, ಕುಡಿಯಲು ನೀರು, ವಾಸಿಸಲು ಮನೆ, ದುಡಿಯಲು ಉದ್ಯೋಗ, ಮನವನ್ನು ಮುದಗೊಳಿಸಿಕೊಳ್ಳಲು ತಕ್ಕುದಾದ ಕ್ರೀಡಾವಿನೋದಗಳು ಇತ್ಯಾದಿ ಸೌಕರ್ಯಗಳು ಲಭ್ಯವಾಗಬೇಕು. ಇವುಗಳನ್ನು ಭೋಗಿಸಲು ಜನರು ದುಡಿಯುತ್ತಾರೆ. ಸೌಕರ್ಯಗಳೇ ಅಲಭ್ಯವಾದರೆ ಜೀವನ ನಿರ್ವಹಣೆ ಸಮಸ್ಯಾಮಯವಾಗುತ್ತದೆ. ಆದುದರಿಂದ ಸರಕಾರವೇ ಆಗಲಿ ಖಾಸಗಿಯವರೇ ಆಗಲಿ ಸಾರ್ವಜನಿಕವಾಗಿ ಸರ್ವರಿಗೂ ಬೇಕಾದಂಥ ಸೌಲಭ್ಯಗಳನ್ನು ಒದಗಿಸುವ ಏರ್ಪಾಟಾಗಬೇಕು. ಇಂಥ ಸೌಲಭ್ಯಗಳು ಸಾಮಾನ್ಯರಿಗೂ ಸರಳವಾಗಿ ಆದಷ್ಟು ಸುಲಭ ಬೆಲೆಗಳಲ್ಲಿ ದೊರೆಯುವಂತಾಗಬೇಕಾದುದು ನ್ಯಾಯ.

ನೀರು, ಬೆಳಕು, ಆಹಾರ, ವಿನೋದ, ಶಿಕ್ಷಣ, ವಸತಿ, ಆರೋಗ್ಯ ಇತ್ಯಾದಿ ಅತ್ಯಾವಶ್ಯಕ ವಸ್ತುಗಳು ಕೆಲವರಿಗೆ ಹೇರಳವಾಗಿಯೂ, ಬಹು ಸುಲಭವಾಗಿಯೂ ಕೈಗೆಟುಕುವಂತೆ ಇದ್ದು ಇನ್ನಿತರರಿಗೆ ದುರ್ಲಭವಾದರೆ ಅದು ಅನ್ಯಾಯದ ಸ್ಥಿತಿ. ಸಮಾಜದಲ್ಲಿನ ಏರಿಳಿವುಗಳೇ ಇಂಥ ಪರಿಸ್ಥಿತಿಗೆ ಕಾರಣ. ಆದುದರಿಂದ ಸಮಾಜ ವಾದದಲ್ಲಿ ನಂಬುಗೆಯನ್ನಿರಿಸಿದ ಜನರ ಪ್ರಯತ್ನದ ಫಲವಾಗಿ ಸುಖೀರಾಜ್ಯದ ಕಲ್ಪನೆಯ ರಾಜ್ಯಾಡಳಿತದಲ್ಲಿ ಮಹತ್ವದ ಸ್ಥಾನವನ್ನು ಪಡೆದಿದೆ. ಜನರಲ್ಲಿ ತಾರತಮ್ಯವಿರಕೂಡದು, ಸರ್ವರಿಗೂ ಹುಟ್ಟಿದಂದಿನಿಂದ ಸಾಯುವವರೆಗೂ ಬೇಕಾದ ಅತ್ಯಾವಶ್ಯಕ ವಸ್ತುಗಳು ಸರಿಯಾದ ಪ್ರಮಾಣದಲ್ಲಿ ದೊರೆಯಬೇಕು, ಶ್ರೀಮಂತನ ಸುಪ್ಪತ್ತಿಗೆಯ ಜೀವನ ಬಡವನ ಒಣರೊಟ್ಟಿಯ ಕರಕಷ್ಟ ಜೀವನ ಸುಖೀರಾಜ್ಯದಲ್ಲಿ ಇರಕೂಡದು, ಎಲ್ಲರಿಗೂ ಸಮಾಜಜೀವನವು ಸಹ್ಯವಾದುದಾಗಿರಬೇಕು ——ಇತ್ಯಾದಿ ವಿಚಾರಗಳ ಆಧಾರದ ಮೇಲೆ ರಾಜ್ಯಾಡಳಿತವನ್ನು ರೂಪಿಸುತ್ತಿರುವುದರಿಂದ ಸರಕಾರವೇ ಜೀವನಾವಶ್ಯಕ ವಸ್ತು —— ಸೇವೆಗಳನ್ನು ಎಲ್ಲರಿಗೂ ಒದಗಿಸಬೇಕೆಂಬುದು ಇತ್ತೀಚೆಗೆ ಆಂದೋಲನದ ರೀತಿಯಲ್ಲಿ ಜಾರಿಗೆ ಬರುತ್ತಲಿದೆ. ಸಾಮಾಜಿಕ ಭದ್ರತೆಯು ರಾಜಕೀಯ ಧೋರಣೆಯ ಕೇಂದ್ರ ಆಸಕ್ತಿಯಾಗಿದೆ. ಈ ದೃಷ್ಟಿಯಿಂದ ನೋಡಿದಾಗ ಸಮಾಜಸೇವೆಗಳು ಜನರಿಗೆ ಬಹು ಸುಲಭವಾಗಿ ದೊರೆಯುವಂಥ ಏರ್ಪಾಟಾಗಬೇಕು. ಆದರೆ ಹಿಂದೆಯೇ ಹೇಳಿದಂತೆ ಇವನ್ನು ಉಚಿತವಾಗಿ ಅಥವಾ ಪುಕ್ಕಟೆಯಾಗಿ ಒದಗಿಸಬೇಕೆಂಬುದೇನೂ ಕಡ್ಡಾಯವಲ್ಲ. ಆದರೂ ಜನರು ಈ ಸೇವೆಗಳಿಗಾಗಿಯೇ ಆತಂಕದ, ಅಭದ್ರ ಭಾವನೆಯ ಬದುಕನ್ನು ಜೀವಿಸುವಂತಾಗಬಾರದು.

ಈ ವಿವರಣೆಯಿಂದ ಇಷ್ಟು ಅರ್ಥವಾಗಬೇಕು : ಸಮಾಜಜೀವನವು ಸಹಜವಾಗಿಯೇ ಸರಳವೂ, ಸಮಸ್ಯಾರಹಿತವೂ ಆಗಿರುತ್ತದೆ ; ಅದನ್ನು ಹಾಗೆ ಸಂಪೋಷಿಸಿಕೊಂಡು ಸಾಗಲು, ಜನರಿಗೆ ತಮ್ಮ ವ್ಯಕ್ತಿತ್ವವನ್ನು ಆರೋಗ್ಯಕರವಾಗಿ ಬೆಳೆಸಿಕೊಂಡು, ಸಾಮಾಜಿಕ ಸಂಬಂಧಗಳನ್ನು ಪಡೆದು ಜೀವಿಸಲು ಅನುಕೂಲವಾಗುವಂತೆ ಈ ಸಮಾಜ ಸೇವೆಗಳನ್ನು ಒದಗಿಸಬೇಕು. ಇವುಗಳನ್ನು ಒದಗಿಸುವಲ್ಲಿ ಸರಿಯಾದ ವ್ಯವಸ್ಥೆಯಾಗಬೇಕು ; ಇವುಗಳ ಸಂಘಟನೆ ಯಾಗಬೇಕು. ಯಾರೇ ಆಗಿರಲಿ ಇಂಥ ಸೇವೆಗಳನ್ನು ಒದಗಿಸುವಲ್ಲಿ ನಿರತರಾಗಿರುವವರು ಸಮಾಜಸೇವೆಯಲ್ಲಿ ನಿರತರಾಗಿರುತ್ತಾರೆ ಎಂದೇ ಗಣಿಸಬೇಕು. ವೈದ್ಯರು, ಎಂಜಿನಿಯರರು, ಶಿಕ್ಷಕರು, ಆಡಳಿತಾಧಿಕಾರಿಗಳು, ವಿವಿಧ ಇಲಾಖೆಗಳಲ್ಲಿನ ಸಿಬ್ಬಂದಿಯವರು — ಇವರೆಲ್ಲರೂ ಸಮಾಜಸೇವೆಗಳನ್ನು ಒದಗಿಸುವಲ್ಲಿ, ಅವನ್ನು ಸಂಘಟಿಸುವಲ್ಲಿ ನಿರತರಾದವರೇ. ಆದರೆ ಒದಗಿಸುವ, ಸಂಘಟಿಸುವ ಕಾರ್ಯವು ಆರೋಗ್ಯಕರವೂ, ಸರಿಯಾದ ಸೂತ್ರಗಳಿಗನುಗುಣ ವಾಗಿಯೂ ಇರಬೇಕು ಅಷ್ಟೇ.

# ಅಭ್ಯಾಸ - 1

(1) ಕೆಳಗಿನ ಪ್ರಶ್ನೆಗಳಿಗೆ ಪಠ್ಯದ ನೆರವಿನಿಂದ ಉತ್ತರಿಸಿರಿ. ಉತ್ತರಗಳು ಸಂಕ್ಷಿಪ್ತವಾಗಿರಲಿ.

1. ಸಮಾಜ ಸೇವೆ ಎಂದರೇನು?

..............................................................................................

..............................................................................................

..............................................................................................

..............................................................................................

2. ಸಮಾಜ ಸೇವೆಗೆ ಕೆಲವು ನಿದರ್ಶನಗಳನ್ನು ಕೊಡಿರಿ.

..............................................................................................

..............................................................................................

..............................................................................................

3. ಸಮಾಜದಲ್ಲಿ ಮನುಷ್ಯನಿಗೆ ದೊರಕಬೇಕಾದ ಅತ್ಯವಶ್ಯ ಸೌಲಭ್ಯಗಳು ಯಾವುವು?

..............................................................................................

..............................................................................................

..............................................................................................

4. ಸುಖೀರಾಜ್ಯದ ಒಂದು ಮುಖ್ಯ ಲಕ್ಷಣವನ್ನು ನಿರೂಪಿಸಿರಿ.

..............................................................................................

..............................................................................................

..............................................................................................

(2) ಕೆಳಗಿನ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು (✓) ಗುರುತಿನಿಂದ ಆಯ್ಕೆ ಮಾಡಿರಿ. ನಿಮ್ಮ ಆಯ್ಕೆಯನ್ನು ಸಮರ್ಥಿಸಿ ಒಂದು ಇಲ್ಲವೇ ಎರಡು ವಾಕ್ಯಗಳನ್ನು ಬರೆಯಿರಿ.

(ಅ) ಸಮಾಜ ಸೇವೆ ಎಂದರೆ

(i) ಬೇರೆಯವರಿಂದ ಸಹಾಯವನ್ನು ಪಡೆಯುವುದು
(ii) ಇತರರಿಗೆ ಸ್ವಾರ್ಥವಿಲ್ಲದೆ ನೆರವಾಗುವುದು
(iii) ಬಂಧುಬಾಂಧವರ ಹಿತಾಸಕ್ತಿಯನ್ನು ನೋಡುವುದು
(iv) ಅಧಿಕಾರ ಪಡೆಯಲು ಜನರೊಡನೆ ಸೇರಿ ದುಡಿಯುವುದು

ಆಯ್ಕೆಗೆ ಕಾರಣ : ..............................................................................

..............................................................................

(ಆ) ಸಮಾಜ ಸೇವೆಗೆ ಒಂದು ಉದಾಹರಣೆ

(i) ಪರಿಹಾರ ನಿಧಿಗೆ ಹಣ ನೀಡುವುದು
(ii) ಆಸ್ಪತ್ರೆಗಳನ್ನು ಕಟ್ಟಿಸುವುದು
(iii) ರಾಜಕೀಯ ಚಟುವಟಿಕೆಗಳಲ್ಲಿ ತೊಡಗುವುದು
(iv) ಕುಟುಂಬವನ್ನು ಪೋಷಿಸುವುದು

ಆಯ್ಕೆಗೆ ಕಾರಣ : ..............................................................................

..............................................................................

(ಇ) ಸಮಾಜ ಸೇವೆ ಪಡೆಯಲು ಅರ್ಹರಾದವರು

(i) ಬೇರೆದೇಶದಿಂದ ಬಂದ ನಿರಾಶ್ರಿತರು
(ii) ಸಮಾಜದ ಪ್ರತಿಯೊಬ್ಬ ನಾಗರಿಕ
(iii) ಆಡಳಿತಕ್ಕೆ ಜೀವನವನ್ನು ಮುಡುಪಿಟ್ಟವರು
(iv) ಅವಶ್ಯಕತೆಯಿರುವ ಪ್ರತಿಯೊಬ್ಬ ನಾಗರಿಕ

ಆಯ್ಕೆಗೆ ಕಾರಣ : ..............................................................................

..............................................................................

(ಈ) ಸಮಾಜಸೇವೆಯಲ್ಲಿ ತೊಡಗಿರುವವರು

(i) ರಾಜಕಾರಣಿಗಳು
(ii) ವೈದ್ಯರು
(iii) ವ್ಯಾಪಾರಿಗಳು
(iv) ಭಿಕ್ಷುಕರು

ಆಯ್ಕೆಗೆ ಕಾರಣ : ................................................................................................

................................................................................................

(ಉ) ಸುಖೀರಾಜ್ಯದಲ್ಲಿ

(i) ಪ್ರತಿಯೊಬ್ಬರಿಗೂ ಅವರವರ ಅಂತಸ್ತಿಗೆ ತಕ್ಕ ಸೌಕರ್ಯಗಳಿರಬೇಕು
(ii) ಹಣವುಳ್ಳವರು ಸೌಕರ್ಯಗಳನ್ನು ಪಡೆಯುವಂತಿರಬೇಕು
(iii) ಸಮಾಜ ಸೇವೆ ಎಂಬುದೇ ಇರಬಾರದು
(iv) ಪ್ರತಿಯೊಬ್ಬರ ಅವಶ್ಯಕತೆಗಳೂ ತಾರತಮ್ಯವಿಲ್ಲದೆ ಪೂರೈಕೆಯಾಗಬೇಕು.

ಆಯ್ಕೆಗೆ ಕಾರಣ : ................................................................................................

................................................................................................................

................................................................................................................

(3) ಸೂಕ್ತ ಪದಗಳನ್ನು ಆಯ್ದು ಖಾಲಿ ಇರುವ ಜಾಗಗಳನ್ನು ತುಂಬಿ ವಾಕ್ಯಗಳನ್ನು ಪೂರ್ಣಗೊಳಿಸಿ.

(i) ಸೇವೆ ಎಂದರೆ ................................................................................................
(ii) ಪ್ರತಿಯೊಬ್ಬ ನಾಗರಿಕನಿಗೂ ..................................ಅವಶ್ಯವಿದ್ದಷ್ಟು ದೊರಕಲೇಬೇಕು.
(iii) ..........................................ಎಂದರೆ ತಾರತಮ್ಯವಿಲ್ಲದ ಸಮಾಜ.
(iv) ತನ್ನ ಕೆಲಸಗಳನ್ನು ತಾನೇ ಮಾಡಿಕೊಳ್ಳಲು ಆಗದವನು ................................................
(v) ಸಮಾಜ ಸೇವೆ ಹಾಗೂ ..................................ಇವುಗಳಲ್ಲಿ ವ್ಯತ್ಯಾಸವಿದೆ.

(ಕರ್ತವ್ಯ, ಸುಖೀರಾಜ್ಯ, ಸೌಲಭ್ಯ, ಕಲ್ಯಾಣ, ಊನಶಕ್ತ, ಅನಾಗರಿಕ)

(4) (1) ವಿರುದ್ಧಾರ್ಥವುಳ್ಳ ಪದಗಳನ್ನು ಬರೆಯಿರಿ:

ಆರೋಗ್ಯ ಪುರಾತನ, ಸರಳ, ಶ್ರೀಮಂತ, ಪರಾವಲಂಬಿ

............... ............... ............... ............... ...................

(2) ಸಮಾನಾರ್ಥಕ ಪದಗಳನ್ನು ಬರೆಯಿರಿ:

ಧನ, ವ್ಯಯ, ಪುಕ್ಕಟೆ, ಶಿಶು, ಸೌಲಭ್ಯ ಪುನರ್ನಿರ್ಮಾಣ

............... ............... ............... ............... ...................

(3) ಕೆಳಗಿನ ವಾಕ್ಯಗಳ ನಿಷೇಧರೂಪಗಳನ್ನು ಬರೆಯಿರಿ:

(ಅ) ಈ ಕಾರ್ಯ ಪ್ರಸಂಗಗಳು ತನ್ನ ಕರ್ತವ್ಯಗಳೆಂದು ತೋರಬಹುದು.

................................................................................................................

(ಆ) ಅವರಿಗೆ ಬೇಕಾದ ಸೌಲಭ್ಯಗಳು ಲಭ್ಯವಾಗಬೇಕು.

................................................................................................................

(ಇ) ಸಾಮಾನ್ಯರಿಗೂ ಸುಲಭ ಬೆಲೆಗಳಲ್ಲಿ ದೊರಕುವುದು ನ್ಯಾಯ.

................................................................................................................

(ಈ) ಇವು ಸಾರ್ವಜನಿಕ ಮಹತ್ವವನ್ನು ಪಡೆಯುತ್ತವೆ.

................................................................................................................

(ಉ) ಇದು ಉತ್ತರಿಸಲು ಕಠಿಣವಾದ ಪ್ರಶ್ನೆ

................................................................................................................

(4) ಕೆಳಗಿನ ವಾಕ್ಯಗಳನ್ನು ವಿಭಜಿಸಿ ಎರಡು( ಅಥವಾ ಎರಡಕ್ಕಿಂತ ಹೆಚ್ಚು) ವಾಕ್ಯಗಳನ್ನಾಗಿ ಬರೆಯಿರಿ.

(ಅ) 'ಸೋಪೆ' ಎಂಬ ಶಬ್ದವು ನಿಸ್ವಾರ್ಥವನ್ನು ಪ್ರತಿಫಲವನ್ನು ಬಯಸದಂಥ ಮನೋನಿರ್ಧಾರವನ್ನು ಸೂಚಿಸುತ್ತದೆ

................................................................................................................

................................................................................................................

(ಆ) ಇವು ಎಲ್ಲರಿಗೂ ಬೇಕಾದುದರಿಂದ ಸಾರ್ವಜನಿಕ ಮಹತ್ವವನ್ನು ಪಡೆಯುತ್ತವ.

..............................................................................................................

..............................................................................................................

(ಇ) ನಾನು ಮಾಡಿದ ಕಾರ್ಯಗಳಿಗೆ ಹಣವನ್ನು ತೆಗೆದುಕೊಂಡರೆ ನಾನೊಬ್ಬ ಕಂಟ್ರಾಕ್ಟರ್ ಆಗುತ್ತೇನೆ.

..............................................................................................................

..............................................................................................................

(ಈ) ಜನರಿಗೆ ಬೇಕಾದ ಸೌಲಭ್ಯಗಳು ಲಭ್ಯವಾಗಬೇಕು.

..............................................................................................................

..............................................................................................................

(ಉ) ಸಮಾಜ ಜೀವನವು ಸಹಜವಾಗಿಯೇ ಸರಳವೂ, ಸಮಸ್ಯಾರಹಿತವೂ ಆಗಿರುತ್ತದೆ.

..............................................................................................................

..............................................................................................................

(5) ಕೆಳಗಿನ ಪದಗುಚ್ಛಗಳನ್ನು ಅರ್ಥವಾಗಿ ಹೊಂದಿರುವ ಪದವನ್ನು ಬರೆಯಿರಿ:

(ಅ) ಊರಿಂದೂರಿಗೆ ತಿರುಗಾಡುವವನು ..............................................

(ಆ) ಕಡಿಮೆ ಬಲ ಇರುವ ವ್ಯಕ್ತಿ ..............................................

(ಇ) ಬೇರೆಯವರನ್ನು ಆಶ್ರಯಿಸುವವನು ..............................................

(ಈ) ಎಲ್ಲ ಪ್ರಜೆಗಳೂ ಸಮಾನರಾಗಿದ್ದು ಎಲ್ಲ ಅವಶ್ಯಕತೆಗಳನ್ನು ಪಡೆಯಲು ಅವಕಾಶವಿರುವ ಸಮಾಜ ..............................................

(ಉ) ತಾನು ಮಾಡಿದ ಸಮಾಜ ಸೇವಾ ಕಾರ್ಯಗಳಿಗೆ ಹಣ ಪಡೆಯುವಾತ ..............

(6) ಕೆಳಗೆ ಕೊಟ್ಟ ಪದಗಳಲ್ಲಿ ಗುಂಪಿಗೆ ಸೇರದುದನ್ನು ಗುರುತು ಮಾಡಿರಿ:

(ಅ) ಕೆರೆ, ಗುಡಿ, ರಸ್ತೆ, ಗಾಳಿ, ಶಾಲೆ ..............................................

(ಆ) ಗರ್ಭಿಣಿ, ಶಿಶು, ಕ್ರೀಡಾಪಟು, ಅಂಧರು, ವೃದ್ಧರು ..............................

(ಇ) ಆರೋಗ್ಯ, ಶಿಕ್ಷಣ, ಉಡುಪು, ಸಂಪತ್ತು, ವಸತಿ ..............................

(ಈ) ಶಿಕ್ಷಕ, ರಾಯಭಾರಿ, ವೈದ್ಯ, ವಿಜ್ಞಾನಿ, ಸೈನಿಕ ..............................

(ಉ) ಸಮಾಜ, ಸಮುದಾಯ, ಕುಟುಂಬ, ವ್ಯಕ್ತಿ, ವೃಂದ ..............................

## 11.3 ಸಾರಾಂಶ

ಸಮಾಜ ಜೀವನವು ಸಹಜವಾಗಿಯೇ ಸರಳವೂ, ಸಮಸ್ಯಾರಹಿತವೂ ಆಗಿರುತ್ತದೆ.

ಸಮಾಜ ಸೇವೆ ಎಂಬಲ್ಲಿ 'ಸೇವೆ' ಎಂಬ ಶಬ್ದವು ನಿಸ್ವಾರ್ಥವನ್ನು ಪ್ರತಿಫಲವನ್ನು ಬಯಸದಂಥ ಮನೋನಿರ್ಧಾರವನ್ನು ಸೂಚಿಸುತ್ತದೆ. ಸಮಾಜಸೇವೆ ವಿವಿಧ ರೀತಿಯಲ್ಲಿ ಮಾಡಬಹುದು. ಶಾಲೆಗಳನ್ನು ಕಟ್ಟಿಸುವುದು, ಬಡವರಿಗೆ ವಸತಿಗಳನ್ನು ನಿರ್ಮಿಸುವುದು. ಊರಿನಲ್ಲಿ ಕುಡಿಯುವ ನೀರಿನ ಬಾವಿಯನ್ನು ತೋಡಿಸುವುದೇ ಮುಂತಾದುವನ್ನು ಸಮಾಜಸೇವೆ ಎನ್ನಬಹುದು.

ಆಹಾರ, ನೀರು, ಅರಿವೆ, ಆರೋಗ್ಯ ಗೃಹ, ಶಿಕ್ಷಣ, ಉದ್ಯೋಗ, ಮನರಂಜನೆ ಇವು ಪ್ರತಿಯೊಬ್ಬ ಮಾನವನಿಗೂ ಅತ್ಯವಶ್ಯಕಗಳು. ಇವುಗಳನ್ನು ಒದಗಿಸಲು ಧರ್ಮಾತ್ಮರು, ದಾನಿಗಳು, ಮುಂತಾದ ಸಮಾಜ ಸೇವಕರೊಂದಿಗೆ ಸರಕಾರವು ಸಹಕರಿಸಬೇಕು.

ಜನರಲ್ಲಿ ತಾರತಮ್ಯ ಭೇದವಿಲ್ಲದೆ, ಸರ್ವರಿಗೂ ಅತ್ಯಾವಶ್ಯಕ ವಸ್ತುಗಳು ಸರಿಯಾದ ಪ್ರಮಾಣದಲ್ಲಿ ದೊರೆತರೇ, ಆಗ ಅದು ಸುಖೀರಾಜ್ಯವೆನಿಸುವುದು.

ವೈದ್ಯರು, ಶಿಕ್ಷಕರು, ಇಂಜನೀಯರುಗಳು, ಆಡಳಿತಾಧಿಕಾರಿಗಳು, ವಿವಿಧ ಇಲಾಖೆಗಳಲ್ಲಿ ಸಿಬ್ಬಂದಿಯವರು - ಇವರೆಲ್ಲರೂ ಸಮಾಜ ಸೇವೆಯನ್ನು ಒದಗಿಸುವಲ್ಲಿ, ಅವನ್ನು ಸಂಘಟಿಸುವಲ್ಲಿ ನಿರತರಾದವರೇ.

ಸರಳ ಮತ್ತು ಮಿಶ್ರ ವಾಕ್ಯಗಳನ್ನು ಗುರುತಿಸಿ. ಮಿಶ್ರವಾಕ್ಯಗಳನ್ನು ಸರಳ ವಾಕ್ಯಗಳಲ್ಲಿ ಬರೆಯಬಹುದು.

ಒಂದು ಪದಕ್ಕೆ ವಿವಿಧ ಅರ್ಥಗಳಿರುತ್ತವೆ. ಆಯಾ ಸಂದರ್ಭಕ್ಕನುಸಾರವಾಗಿ ಅವುಗಳನ್ನು ಉಪಯೋಗಿಸ ಬೇಕಾಗುತ್ತದೆ. ಅದರಂತೆ ವಿರುದ್ಧಾರ್ಥಗಳಿರುತ್ತವೆ. ಒಂದು ವಾಕ್ಯವನ್ನು ನಿಷೇದಾರ್ಥನನ್ನಾಗಿ ಹೇಗೆ ಬರೆಯುವುದೋ ಆ ಅಂಶದಲ್ಲಿ ತಿಳಿದುಕೊಳ್ಳೋಣ.

# ಅಭ್ಯಾಸಗಳಿಗೆ ಉತ್ತರಗಳು

## ಅಭ್ಯಾಸ - 1

(1) 1) ಸಮಾಜ ಸೇವೆ ಎಂದರೆ 'ಪ್ರತಿಫಲಾಪೇಕ್ಷೆ ಇಲ್ಲದ ಕಾರ್ಯ', ತನ್ನಿಂದ ಇತರರಿಗೆ ಉಪಕಾರವಾಗುವಂಥ ಯಾವುದೇ ಕೆಲಸವನ್ನು ಕೈಕೊಂಡರೆ ಅದನ್ನು 'ಸೇವೆ' ಎಂದು ತಿಳಿಯಲಾಗುವುದು. 'ಸೇವೆ' ಎಂಬ ಶಬ್ದವು ನಿಸ್ವಾರ್ಥವನ್ನು, ಪ್ರತಿಫಲವನ್ನು ಬಯಸದಂಥ ಮನೋನಿರ್ಧಾರವನ್ನು ಸೂಚಿಸುತ್ತದೆ.

2) ಸಮುದಾಯದಲ್ಲಿ ರಸ್ತೆಗಳು ಕೆಟ್ಟಿದ್ದರೆ ಅವನ್ನು ಸರಿಮಾಡಿಸುವಿಕೆ, ಊರಿನಲ್ಲಿ ಕುಡಿಯುವ ನೀರಿನ ಬಾವಿಯನ್ನು ತೋಡಿಸುವುದು; ಊರಿನಿಂದ ಊರಿಗೆ ಹೋಗುವ ಪಯಾಣಿಕರಿಗೆ ರಾತ್ರಿ ತಂಗಲು ಛತ್ರವನ್ನು ಕಟ್ಟಿಸುವುದು; ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಾಲಾಕಟ್ಟಡಗಳನ್ನು ಕಟ್ಟಿಸುವುದು; ಬಡವರಿಗೆ ವಸತಿ ನಿರ್ಮಿಸುವುದು; ಊರಿನ ದೇವತೆಯ ಗುಡಿಯನ್ನು ಪುನರ್ನಿರ್ಮಿಸುವುದು ; ದನಗಳಿಗಾಗಿ ಗೋಕಟ್ಟೆ ಕಟ್ಟಿಸುವುದು, ಇವು ಸಮಾಜ ಸೇವೆಗೆ ನಿದರ್ಶನಗಳು.

3) ಆಹಾರ, ನೀರು, ಅರಿವೆ, ಆರೋಗ್ಯ ಗೃಹವಸತಿ, ಶಿಕ್ಷಣ, ಉದ್ಯೋಗ, ಮನರಂಜನೆ ಇತ್ಯಾದಿ ಅವಶ್ಯಕ ಸೌಲಭ್ಯಗಳು ಪ್ರತಿಯೊಬ್ಬ ಮಾನವನಿಗೆ ಲಭ್ಯವಾಗಬೇಕು.

4) ನೀರು, ಬೆಳಕು, ಆಹಾರ, ವಿನೋದ, ಶಿಕ್ಷಣ, ವಸತಿ, ಆರೋಗ್ಯ ಇತ್ಯಾದಿಗಳು ಅತಿ ಮುಖ್ಯ ಅವಶ್ಯಕತೆಗಳು. ಶ್ರೀಮಂತ ಬಡವ ಎಂಬ ತಾರತಮ್ಯವಿಲ್ಲದೆ ಎಲ್ಲರಿಗೂ ಲಭಿಸಿದರೆ ಜನಗಳು ಸುಖವಾಗಿರುವುದಕ್ಕೆ ಆಗುತ್ತದೆ. ಸುಖೀರಾಜ್ಯ ಜನರಲ್ಲಿ ತಾರತಮ್ಯವಿರಕೂಡದು, ಸರ್ವರಿಗೂ ಹುಟ್ಟಿದಂದಿನಿಂದ ಸಾಯುವ ವರೆಗೂ ಬೇಕಾದ ಅತ್ಯವಶ್ಯಕ ವಸ್ತುಗಳು ಸರಿಯಾದ ಪ್ರಮಾಣದಲ್ಲಿ ದೊರೆಯಬೇಕು.
ಬಡವನು

(2) (ಅ) (ii)
ಸಮಾಜಕ್ಕೆ ಯಾವುದು ಅವಶ್ಯವೋ ಗಮನಿಸಿ, ಅದನ್ನು ನಿಸ್ವಾರ್ಥವಾಗಿ, ಇತರರಿಗೆ ಕಲ್ಪಿಸಿ ಸಮಾಜದ ಸೇವೆ, ಶ್ರೇಯಸ್ಸಿಗೆ ಶ್ರಮಿಸುವುದಕ್ಕೆ ಸಮಾಜ ಸೇವೆ ಎನ್ನುತ್ತಾರೆ.

(ಆ) (ii)
ಸಮಾಜದಲ್ಲಿ ಎಲ್ಲರಿಗೂ ಆರೋಗ್ಯ ಪ್ರಧಾನವಾದುದು. ಮುಖ್ಯವಾಗಿ ಬಡವರು, ಗ್ರಾಮಸ್ಥರು, ಅನಾರೋಗ್ಯದಿಂದ ಇದ್ದರೆ ಹತ್ತಿರದಲ್ಲಿ ಆಸ್ಪತ್ರೆ ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ, ನಿಸ್ವಾರ್ಥದಿಂದ ಆಸ್ಪತ್ರೆಯನ್ನು ಕಟ್ಟಿಸಿ, ಸಮಾಜ ಸೇವೆ ಮಾಡುವುದು ಸಮಾಜ ಸೇವೆಗಳಲ್ಲಿ ಅತಿ ಮುಖ್ಯವಾದುದು.

(ಇ) (ii)
ಸಮಾಜದಲ್ಲಿ ಬಡವ, ಶ್ರೀಮಂತ ಎಂಬ ತಾರತಮ್ಯವಿಲ್ಲದೆ ಪ್ರತಿಯೊಬ್ಬರೂ ಸೇವೆಗೆ ಅರ್ಹರೇ. ಸೇವೆಯಲ್ಲಿ ತಾರತಮ್ಯ ಭೇದವನ್ನು ನೋಡಬಾರದು.

(ಈ) (ii)
ಯಾವ ಸಮಾಜದಲ್ಲೇ ಆಗಲಿ ಪ್ರತಿಯೊಬ್ಬರೂ ಯಾವಾಗಲೋ ಒಂದು ಸಾರಿ ಅನಾರೋಗ್ಯಕ್ಕೆ ಗುರಿಯಾಗುತ್ತಾರೆ. ಅಂತಹ ಗಳಿಗೆಯಲ್ಲಿ ವೈದ್ಯನು ಜೊತೆಗಿರುವನು. ಸಮಾಜ ಶ್ರೇಯಸ್ಸನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಸೇವೆ ಮಾಡಿದಾಗ ವೈದ್ಯನು ಸಮಾಜ ಸೇವಕ ಆಗುವನು.

(ಉ) (iv)
ಹಣ, ಉದ್ಯೋಗ, ಅಂತಸ್ತನ್ನು ಹಿಡಿದು ಭೇದವಿರುವಾಗ ಸುಖೀ ರಾಜ್ಯವಾಗಲಾರದು. ಸಮಾಜದಲ್ಲಿ ಪ್ರತಿಮಾನವನ ಅವಶ್ಯಕತೆಗಳನ್ನು ಸರಿಸಮಾನವಾಗಿ ಗುರ್ತಿಸಿ ನೆರವೇರಿಸುವುದೇ ಸುಖೀರಾಜ್ಯವಾಗುತ್ತದೆ.

(3) (i) ಕಲ್ಯಾಣ
(ii) ಸೌಲಭ್ಯ
(iii) ಸುಖೀರಾಜ್ಯ
(iv) ಊನಶಕ್ತಿ
(v) ಕರ್ತವ್ಯ

(4) 1. ಅನಾರೋಗ್ಯ, ನೂತನ, ಕಷ್ಟ, ಬಡವ, ಸ್ವಾವಲಂಬಿ

2. ಹಣ, ಖರ್ಚು, ಉಚಿತವಾಗಿ, ಮಗು, ಸೌಕರ್ಯ ಮತ್ತೆ ಕಟ್ಟುವಿಕೆ

3. (ಅ)ಈ ಕಾರ್ಯಪ್ರಸಂಗಗಳು ತನ್ನ ಕರ್ತವ್ಯಗಳೆಂದು ತೋರಿಬರಲಿಲ್ಲ.
(ಆ) ಅವರಿಗೆ ಬೇಕಾದ ಸೌಲಭ್ಯಗಳು ಲಭ್ಯವಾಗಬಾರದು.
(ಇ) ಸಾಮಾನ್ಯರಿಗೂ ಸುಲಭ ಬೆಲೆಗಳಲ್ಲಿ ದೊರಕುವುದು ನ್ಯಾಯವಲ್ಲ.

(ಈ) ಇವು ಸಾರ್ವಜನಿಕ ಮಹತ್ವವನ್ನು ಪಡೆಯುವುದಿಲ್ಲ.
(ಉ) ಇದು ಉತ್ತರಿಸಲು ಕಠಿಣವಾದ ಪ್ರಶ್ನೆಯಲ್ಲ.

4. (ಅ) ಸೇವೆ ಎಂಬ ಶಬ್ದವು ನಿಸ್ವಾರ್ಥವನ್ನು ಸೂಚಿಸುತ್ತದೆ. ಅದು ಪ್ರತಿಫಲವನ್ನು ಬಯಸದಂಥ ಮನೋಭಾವವನ್ನೂ ಸೂಚಿಸುತ್ತದೆ.

(ಆ) ಇವು ಎಲ್ಲರಿಗೂ ಬೇಕು. ಸಾರ್ವಜನಿಕ ಮಹತ್ವವನ್ನು ಪಡೆಯುತ್ತವೆ

(ಇ) ನಾನು ಮಾಡಿದ ಕಾರ್ಯ ಆ ಕಾರ್ಯಕ್ಕೆ ಹಣ ಪಡೆದರೆ ನಾನೊಬ್ಬ ಕಂಟ್ರಾಕ್ಟರ್ ಆಗುತ್ತೇನೆ.

(ಈ) ಜನರಿಗೆ ಬೇಕಾದುದು ಸೌಕರ್ಯ ಅವು ಲಭ್ಯವಾಗಬೇಕು.

(ಉ) ಸಮಾಜ ಜೀವನವು ಸಹಜವಾಗಿಯೇ ಸರಳವಾಗಿರುವುದು, ಅದು ಸಮಸ್ಯಾರಹಿತವೂ ಆಗಿರುತ್ತದೆ.

(5) ಪ್ರಯಾಣಿಕ
ಬಲಹೀನ
ಪರಾವಲಂಬಿ
ಸುಖೀರಾಜ್ಯ
ಕಂಟ್ರಾಕ್ಟರ್

(6) (ಅ) ಗಾಳಿ
(ಆ) ಗರ್ಭಿಣಿ
(ಇ) ಸಂಪತ್ತು
(ಈ) ರಾಯಭಾರಿ
(ಉ) ವ್ಯಕ್ತಿ